# ಅವತಾರ ಪುರುಷರು



✸ ಭಗವಂತ ಅವತರಿಸಿ ಭಕ್ತಿಯನ್ನು ಉಪದೇಶಮಾಡುತ್ತಾನೆ-ಶರಣಾಗತರಾಗುವಂತೆ ಪ್ರಚೋದಿಸುತ್ತಾನೆ. ಭಕ್ತಿಯಿಂದಲೇ, ಆತನ ಕೃಪೆಯಿಂದ, ಎಲ್ಲವೂ ದೊರೆಯುತ್ತವೆ — ಜ್ಞಾನ, ವಿಜ್ಞಾನ ಎಲ್ಲವೂ ದೊರೆಯುತ್ತವೆ.

✸ ಭಗವಂತ ಈ ಜಗತ್ತಿನಲ್ಲಿ ಲೀಲೆಯನ್ನು ಮಾಡುತ್ತಾನೆ. ಆತ ಭಕ್ತರ ಅಧೀನ. 'ಭಗವತಿ ಶ್ಯಾಮೆ ತನ್ನ ಭಕ್ತರ ಪ್ರೇಮ ಪಾಶದಿಂದ ತನ್ನನ್ನೇ ತಾನು ಬಂಧಿಸಿಕೊಂಡಿದ್ದಾಳೆ.'

✸ ಭಗವಂತ ಅವತಾರಪುರುಷರಲ್ಲಿ ಹೆಚ್ಚಾಗಿ ವ್ಯಕ್ತವಾಗಿರುತ್ತಾನೆ, ಅವತಾರ ಪುರುಷನ ಶರೀರ ಇನ್ನೂ ಬದುಕಿರುವಾಗಲೇ ಆತನಿಗೆ ಪೂಜೆ, ಸೇವೆ ಸಲ್ಲಿಸಬೇಕು. 'ಹಗಲು ಮೂಡಿದೊಡನೆಯೇ ಭಗವಂತ ತನ್ನ ಅಂತಃಪುರಕ್ಕೆ ಹೊರಟು ಹೋಗುತ್ತಾನೆ.'

✸ ಅವತಾರಪುರುಷನನ್ನು ಎಲ್ಲರೂ ಗುರುತಿಸಲಾರರು. ಅವತಾರಪುರುಷನೂ ದೇಹಧಾರಣೆಯ ದೆಸೆಯಿಂದ ನಮ್ಮ ಹಾಗೆ ರೋಗ, ಶೋಕ, ಹಸಿವು, ಬಾಯಾರಿಕೆ ಇವುಗಳಿಗೆ ತುತ್ತಾಗುತ್ತಾನೆ. ರಾಮ ಸೀತೆಗಾಗಿ ಅತ್ತ.

✸ ಒಂದು ಬಹಳ ಎತ್ತರವಾದ ಗೋಡೆಯಿಂದಾಚೆ ವಿಶಾಲವಾದ ಮೈದಾನ. ನಾಲ್ಕು ಮಂದಿ ಸ್ನೇಹಿತರು ಆ ಗೋಡೆಯಿಂದಾಚೆ ಏನಿದೆ ಎಂಬುದನ್ನು ಪತ್ತೆಮಾಡಲು ಸನ್ನದ್ಧರಾದರು. ಅವರಲ್ಲಿ ಮೂರು ಜನರೂ ಒಬ್ಬೊಬ್ಬರಾಗಿ ಗೋಡೆ ಹತ್ತಿ ಮೈದಾನವನ್ನು ನೋಡಿದ ನಂತರ ''ಆಹ! ಆಹ!'' ಅಂತ ಹೇಳಿ, ನಕ್ಕು ಆ ಕಡೆಗೆ ಧುಮುಕಿಬಿಟ್ಟರು. ಅವರು ಮೂವರೂ ಆ ಮೈದಾನದ ಯಾವ ಸುದ್ದಿಸಮಾಚಾರವನ್ನೂ ತಿಳಿಸಲೇ ಇಲ್ಲ. ಕೇವಲ ನಾಲ್ಕನೆಯವ ಮಾತ್ರ ಹಿಂದಿರುಗಿ ಇಳಿದು ಬಂದು ಜನರಿಗೆ ಸುದ್ದಿಸಮಾಚಾರವನ್ನು ಕೊಟ್ಟ. ಕೆಲವರು ಬ್ರಹ್ಮಜ್ಞಾನ ದೊರೆತ ನಂತರವೂ ಶರೀರ ಉಳಿಸಿಕೊಂಡಿರುತ್ತಾರಲ್ಲ ಲೋಕಶಿಕ್ಷಣಕ್ಕಾಗಿ, ಅವರು ದೇವರ ಹಾಗೆ. ಅವತಾರ ಪುರುಷರು ಈ ಗುಂಪಿಗೆ ಸೇರಿದವರು.

✸ ನರಲೀಲೆಯಲ್ಲಿ ಭಗವಂತ ಮನುಷ್ಯನ ಹಾಗೆಯೇ ವರ್ತಿಸಬೇಕಾಗುತ್ತದೆ. ಆದ್ದರಿಂದ ಅವತಾರಪುರುಷರನ್ನು ಗುರುತಿಸುವುದು ಬಹಳ ಕಷ್ಟ. ಭಗವಂತ ಮನುಷ್ಯನಾದಾಗ ತದ್ವತ್ ಮನುಷ್ಯನೇ, ಅದೇ ಹಸಿವು, ಬಾಯಾರಿಕೆ, ರೋಗ, ಶೋಕ, ಕೆಲವು ವೇಳೆ ಭಯ ಕೂಡ — ಮನುಷ್ಯನ ಹಾಗೆಯೇ. ರಾಮಚಂದ್ರ ಸೀತೆಗಾಗಿ ಬಹಳವಾಗಿ ದುಃಖಾನ್ವಿತನಾಗಿ ಹೋಗಿದ್ದ. ಶ್ರೀಕೃಷ್ಣ ತನ್ನ ತಂದೆ ನಂದನ ಮೆಟ್ಟು ಮತ್ತು ಮರದ ಪೀಠವನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋದ.

✸ ಮಹಾಪುರುಷರು ಜೀವರ ದುಃಖಗಳನ್ನು ನೋಡಿ ಸಹಿಸಲಾರದೆ ಅವರಿಗೆ ಭಗವಂತನನ್ನು ಪಡೆಯುವ ಮಾರ್ಗವನ್ನು ತೋರಿಸಿಕೊಟ್ಟುಬಿಡುತ್ತಾರೆ. ಶಂಕರಾಚಾರ್ಯರು ಲೋಕಶಿಕ್ಷಣಕ್ಕಾಗಿ, 'ವಿದ್ಯೆಯ ಅಹಂ' ಅನ್ನು ಇಟ್ಟುಕೊಂಡಿದ್ದರು. ಅನ್ನದಾನಕ್ಕಿಂತ ಜ್ಞಾನದಾನ, ಭಕ್ತಿದಾನ ಬಹಳ ಉತ್ತಮವಾದುವು. ಅದಕ್ಕಾಗಿಯೇ ಆಚಂಡಾಲಾದಿಯಾಗಿ ಎಲ್ಲರಿಗೂ ಚೈತನ್ಯದೇವ ಭಕ್ತಿದಾನವನ್ನು ಮಾಡಿದುದು. ದೇಹದ ಸುಖ ದುಃಖವಂತೂ ಇದ್ದೇ ಇರುತ್ತವೆ. ನೀನು ಇಲ್ಲಿಗೆ ಬಂದುದು ಮಾವಿನ ಹಣ್ಣು ತಿನ್ನಲು. ಅವನ್ನು ತಿಂದು ಹೋಗು.

✸ ಅವತಾರಪುರುಷರಲ್ಲಿ ಭಗವಂತ ಹೆಚ್ಚಾಗಿ ವ್ಯಕ್ತವಾಗಿರುತ್ತಾನೆ. ರಾಮ ಲಕ್ಷ್ಮಣನಿಗೆ ಹೇಳಿದ: ''ತಮ್ಮ, ಯಾರಲ್ಲೇ ಆಗಲಿ ಊರ್ಜಿತಭಕ್ತಿ ಬೆಳೆದು, ಆತ ಭಾವಪರವಶನಾಗಿ ನಗುವುದು, ಅಳುವುದು, ನರ್ತಿಸುವುದು, ಹಾಡುವುದು ಇವನ್ನು ಮಾಡುತ್ತಿದ್ದರೆ, ಆತನಲ್ಲಿ ನಾನು ನಿಜವಾಗಿಯೂ ಇದ್ದೇನೆ ಎಂಬುದನ್ನು ತಿಳಿದುಕೊ.''

✸ಎಲ್ಲಿಯವರೆಗೆ ಒಂದು ಕಿಂಚಿತ್ತಾದರೂ ಸರಿಯೆ 'ಅಹಂ' ಎಂಬುದು ಇರುವುದೊ, ಅಲ್ಲಿಯವರೆಗೆ ವ್ಯಕ್ತಿ ಆದ್ಯಾಶಕ್ತಿಯ ಎಲ್ಲೆಯೊಳಗೇ ಇರಬೇಕಾಗುತ್ತದೆ. ಆಕೆಯ ಎಲ್ಲೆಯನ್ನು ಮೀರಿ ಹೋಗುವ ಹಾಗೇ ಇಲ್ಲ.

✸ ಆದ್ಯಾಶಕ್ತಿಯ ಸಹಾಯದಿಂದಲೇ ಭಗವಂತನ ಅವತಾರ ಲೀಲೆ. ಭಗವಂತ ತನ್ನ ಈ ಶಕ್ತಿಯಿಂದ ಮನುಷ್ಯನಾಗಿ ಅವತರಿಸುತ್ತಾನೆ. ಆಗ ಮಾತ್ರವೇ ಅವತಾರಪುರುಷನಿಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಎಲ್ಲವೂ ಭಗವತಿಯ ಶಕ್ತಿಯಿಂದಲೇ ಘಟಿಸುತ್ತವೆ.

**ಶ್ರೀರಾಮಕೃಷ್ಣ ವಚನವೇದದಿಂದ**